## ಕಲ್ಪನೆ



ಎಳೆಬಿಸಿಲ ಮಾಯೆ...

ಹೊತ್ತು ಹುಟ್ಟುವ ಮುನ್ನ ಅನ್ನಕ್ಕೆ ದಾರಿ ಮಾಡಿಕೊಳ್ಳುವ ರೈತನಿಗೆ ಎಳೆಬಿಸಿಲೆಂದರೆ ಬಲು ಇಷ್ಟ. ನಸುಕಿನ ತಂಗಾಳಿ, ರಾತ್ರಿಯ ತಂಪನ್ನು ಉಂಡು ಮೃದುವಾದ ಭೂಮಿಯೊಡನೆ ಅವನು ಉಲ್ಲಸಿತನಾಗಿ ಸಂಭಾಷಣೆ ನಡೆಸಲು ನಸುಕೇ ಸಕಾಲ. ಕಪ್ಪು ಮಣ್ಣಿನ ಮೇಲೆ ಕನಸಿನ ಹಾಡು ನೇಯುತ್ತ ದುಡಿಯುವ ರೈತನಿಗೆ ಪ್ರಕೃತಿಯ ಮೇಲೆ ಅಗಾಧ ನಂಬಿಕೆ. ಆದಕ್ಕೆ ಎಳೆ ಸೂರ್ಯನದ್ದೇ ಸಾಕ್ಷಿಯೆನಿಸುತ್ತದೆ. ಮುಂಜಾನೆಯ ಈ ದೃಶ್ಯವನ್ನು ನೋಡಿದಾಗ ನಿಮ್ಮ ಹೃದಯದಲ್ಲಿ ಕವಿತೆಯ ಸಾಲುಗಳು ಅರಳಬಹುದು. ಅವುಗಳನ್ನು ನೇಯ್ದು ಕವಿತೆಯಾಗಿಸಿ ನಮಗೆ ಕಳುಹಿಸುವಿರಾ...

ನಿಮ್ಮ ಕಲ್ಪನೆಯ ಕವಿತೆಯನ್ನು ಬರೆದು ನಮಗೆ ಕಳುಹಿಸಲು ಕೊನೆಯ ದಿನಾಂಕ ಜೂನ್ 15.

**ಚಿತ್ರ: ನಾಗೇಶ ಬಾರ್ಕಿ**

ವಿಳಾಸ: ಕಲ್ಪನೆ ವಿಭಾಗ, 'ಮಯೂರ'
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
ಇ–ಮೇಲ್: editormy@mayura.co.in